ಮನೆಯಲ್ಲಿ ನೋಡಿ ಬಾ ಎಂದರೆ, ಅವಳಿಲ್ಲಿಗೆ ಬಂದಿಲ್ಲ ಎಂಬ ಉತ್ತರವೇ ಬಂತು. ಗೌರಿಯ ಅಪ್ಪ ಬಾಳಣ್ಣನಿಗೇ ಫೋನ್ ಮಾಡಿ ವಿಚಾರಿಸುವ ಧೈರ್ಯವಾಗಲಿಲ್ಲ ಆಕೆಗೆ.

'ಕಿವಿಗೆ ಇಯರ್‌ಫೋನ್ ಸಿಗಿಸಿಕೊಂಡು ಬಾಗಲಾ ಹಕ್ಕೊಂಡ ಕೂತ್ರ, ಇಂವಗ ಹೊರಗ ಭೂಕಂಪ ಆದ್ರೂ ಗೊತ್ತಾಗಂಗಿಲ್ಲಾ. ಎಲ್ಲಾದಕ್ಕೂ ನಾನ ಒದ್ಯಾಡಬೇಕು' ಎಂದುಕೊಳ್ಳುತ್ತ ಶಿರೀನ್, ಶಿಶಿರನನ್ನು ಕೆಲಸ ಬಿಡಿಸಿ ಹೊರಗಟ್ಟಿದಳು, ಒಂದಿಷ್ಟು ಅಕ್ಕ ಪಕ್ಕದವರನ್ನು, ಎದುರು ಅಂಗಡಿಯವನನ್ನು ಕೇಳಿಕೊಂಡು ಬಾ... ಗೌರಿಯ ಬಗ್ಗೆ ಎಂದು. ಹರೆಯಕ್ಕೆ ಕಾಲಿಡುತ್ತಿರುವ ಹುಡುಗಿ... ಹೀಗೆ ಏಕಾಏಕಿ ಕಾಣೆಯಾಗಿದ್ದಾಳೆ ಎಂದರೆ? ಕಾರಣವಾದರೂ ಏನು? ನಾಳೆ ಪೊಲೀಸು ಕೇಸು ಗೀಸು ಆದರೆ? ತಾವು ಅವಳನ್ನು ಮನೆಯವಳಂತೆಯೇ ನೋಡಿಕೊಂಡರೂ, ಕೆಲಸಕ್ಕೆ ಸಂಬಳವನ್ನು ಅವಳ ಅಪ್ಪ ಬಾಳಣ್ಣನಿಗೆ ತಲುಪಿಸುತ್ತಿರುವದಂತೂ ನಿಜ. ನಾಳೆ ಇದೇ ಮಾತು ಚೈಲ್ಡ್ ಲೇಬರ್ ಅದೂ ಇದು ಎಂದು ತಮ್ಮ ಕುತ್ತಿಗೆಗೇ ಸುತ್ತಿಕೊಂಡರೆ?

'ಎರಡ ತಾಸಿನ ಹಿಂದ ಗೌರಿ, ವೀರೇಶನ ಜೋಡಿ ಹೋಗೂದನ್ನ ಎದರ್ಗಿನ ಅಂಗಡಿ ಹುಡುಗಾ ನೋಡ್ಯಾನಂತ' ಎಂದು ಶಿಶಿರ ಹೇಳಿದಾಗಲಂತೂ ಶಿರೀನ್ ಹೌಹಾರಿದಳು. ಮನೆಯ ತೋಟದ ಕೆಲಸ ಮಾಡಲು ವಾರಕ್ಕೆ ಎರಡು ದಿನ ಒಂದೊಂದು ತಾಸು ಬರುವ ವೀರೇಶನ ಜೊತೆ ಹೋಗಿದ್ದಾಳೆಂದರೆ... ಲಫಡಾ ಎಷ್ಟು ದಿನದಿಂದ ನಡೆದಿತ್ತೊ? ಆತನಿಗೆ ಹೆಂಡತಿ ಮಕ್ಕಳಿದ್ದಾರೆನ್ನುವ ಖಬರು ಬೇಡವೆ ಈ ಹುಡುಗಿಗೆ? ಛೆ. ಗೌರಿ ಹೀಗೆ ಮಾಡಿದ್ದಾಳೆಂದು ನಂಬಲಿಕ್ಕೂ ಆಗುತ್ತಿಲ್ಲ. ವೀರೇಶನೂ ಎಷ್ಟು ಸಂಭಾವಿತನಂತೆ ಕಾಣುತ್ತಿದ್ದ. ಈಗ ತನ್ನ ಮೊಬೈಲನ್ನೂ ಎತ್ತುತ್ತಿಲ್ಲ... ಆತನ ಮನೆ ಎಲ್ಲಿದೆ ಎನ್ನುವುದೂ ಗೊತ್ತಿಲ್ಲ. ಎಲ್ಲಿ ಅಂತ ಹುಡುಕಬೇಕು? 'ಇಬ್ರೂ ಎಲ್ಲೆ ಹೋಗ್ಯಾರೊ? ಹಾಳಾಗಿ ಹೋಗ್ಲಿ... ಇವರ್ನ ನಾವು ಕೆಸರಿನಿಂದ ಮ್ಯಾಲೆ ಎತ್ತಲಿಕ್ಕೆ ನೋಡಿದಷ್ಟೂ ಕೆಳಗಿಳೀತಾರ... ಎದರಿಗೆ ಬಂದರ, ಎರಡು ಕಪಾಳಕ್ಕ ಬಿಗದು, ಮದ್ಲ ಹೊತ್ತಹಾಕತೇನಿ ಅಕಿನ್ನ' ಎಂದುಕೊಳ್ಳುತ್ತ, ಶಿರೀನ್ ಸಿಟ್ಟಿನಿಂದ ತಲೆ ಕೊಡವಿಕೊಂಡು ಮೇಲೆದ್ದು, ರಾತ್ರಿ ಊಟಕ್ಕೆ ಅಕ್ಕಿ ತೊಳೆಯತೊಡಗಿದಳು. ಹಸಿವೆಗೆ ಯಾರ ಮುಲಾಜು? ಸಣ್ಣ ಮಕ್ಕಳು, ಕಳೆದೊಂದು ತಿಂಗಳಿನಿಂದ ಇಲ್ಲೇ ಇರುವ ವಯಸ್ಸಾದ ಮಾವ, ಹಗಲಿಡೀ ದುಡಿದು, ಹಾಸಿಗೆಗೆ ಬೆನ್ನಿಟ್ಟರೆ ಸಾಕು ಎಂದುಕೊಳ್ಳುತ್ತಿರುವ ತಾವಿಬ್ಬರು...

ರಾತ್ರಿ ಇಡೀ ರೆಪ್ಪೆಗೆ ರೆಪ್ಪೆ ಕೂಡದೇ ಶಿರೀನ್ ಒದ್ದಾಡಿದಳು. ಗೌರಿಯ ಬಗ್ಗೆ ಒಮ್ಮೆ ಸಿಟ್ಟು ಉಕ್ಕೇರಿದರೆ, ಮತ್ತೊಮ್ಮೆ, 'ಎಲ್ಲಿದ್ದಾಳೊ? ಹ್ಯಾಂಗಿದ್ದಾಳೊ?' ಎನ್ನುವ ಕಾಳಜಿ. ಮರುಕ್ಷಣದಲ್ಲೇ 'ಅಕಿ ಇಲ್ಲದ ಮನಿ ನಡಿಯೂದ್ಹ್ಯಾಂಗ?' ಎಂಬ ಚಿಂತೆ. 'ಗೌರಿ ಹೀಂಗ ಮಾಡತಾಳಂತ ನಾ ಕನಸ ಮನಸಿನಾಗೂ ಅನಕೊಂಡಿದ್ದಿಲ್ಲಾ... ಅಕಿ ನಮ್ಮನೀಗೆ ಬಂದು ಸನೆಸನೇಕ್ಕ ಆರ ವರ್ಷ ಆಗಲಿಕ್ಕೆ ಬಂತು. ಚಿನ್ಮಯ್ ಹುಟ್ಟಿದಾಗ ಕೂಸಿನ್ನ ಆಡಸಲಿಕ್ಕಂತ ಕರಕೊಂಡ ಬಂದಿದ್ದೆ ನಮ್ಮೂರಿನಿಂದ. ಹತ್ತ ವರ್ಷದ ಹುಡಗಿ ಇತ್ತು ಬಂದಾಗ... ಆವಾಗಿಂದ ನಮ್ಮನೀಗೆ ಇಷ್ಟ ಛೊಲೊ ಹೊಂದಿಕೊಂಡಾಳ ಅಂದ್ರ, ಈಗ ಅಕಿ ಇಲ್ದ ಮನಿ ನಡಿಯೂದುಲ್ಲಾ ಅನ್ನೂ ಪರಿಸ್ಥಿತಿ ಅದ. ನಾವರ ಅಕಿನ್ನ ಆಳು ಅಂತ ಎಂದ ನಡಿಸಿಕೊಂಡೇವಿ?... ಸ್ವಂತ ತಂಗಿಗತೆ ನೋಡಿಕೊಂಡೀನಿ... ನಮ್ಮ ಜೋಡೀನ ಊಟಾ ತಿನಸು, ಅರಿವಿ ಅಂಚಡಿ, ನಮ್ಮ ಜೋಡೀನ ಓಡ್ಯಾಟಾ... ಬಾಳಣ್ಣಾ ತಲಮಾರಿನಿಂದ ನನ್ನ ತವರಮನಿ ರೈತಾ, ನನ್ನ ಸೈತ ಎತ್ತಿ ಆಡಿಸ್ದವಾ ಅಂತ, ನಾ ಕೇಳಿದಾಗ ಇಲ್ಲಾ ಅನಲಾರ್ದ, ನನ್ನ ಮ್ಯಾಲೆ ವಿಶ್ವಾಸ ಇಟ್ಟು ಮಗಳ್ನ ಕಳಿಸಿ ಕೊಟ್ಟಿದ್ದಾ. ಅಂವಗ ಏನ ಉತ್ತರಾ ಕೊಡೂದೀಗ?

ಮನ್ನೆ ಅವ್ವಾ ಅಂದಿದ್ಲು... ಹುಡಗಿ ಧೊಡ್ಡಾಕ್ಯಾಗ್ಯಾಳ... ಮೈಕೈ ತುಂಬಕೊಂಡು ಕಣ್ಣು ಕುಕ್ಕೂಹಂಗ ಆಗ್ಯಾಳ... ಬೆಂಕಿ ಹತ್ರ ಬೆಣ್ಣಿ ಇಡೂದು ಶಾಣ್ಯಾತನಾ ಅಲ್ಲಾ... ನಾಳೆ ಒಂದ ಹೋಗಿ ಒಂದ ಆದೀತ್ನೋಡು... ಸುಮ್ಮ ಕಳಿಸಿಬಿಡು... ಅಕಿ ಮನ್ಯಾಗ ಅಕಿ ಇರತಾಳ... ಅಂತ. ನಾನು, ಗೌರಿ ಅಂಥಾ